<u>ಅಸಲು ದಾವಾ ಸಂಖ್ಯೆ:- **199/2019**</u> ಪಿ.ಡಬ್ಲ್ಯೂ:- **1**

ದಿನಾಂಕಃ **20-11-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ಸಾಕ್ಷಿಯು 2 ಛಾಯಾಚಿತ್ರಗಳನ್ನು ನೋಡಿ ಸದರಿ ಛಾಯಾಚಿತ್ರಗಳು ದಾವಾ ಆಸ್ತಿಗೆ ಸಂಬಂಧಪಟ್ಟ ಛಾಯಾಚಿತ್ರಗಳು ಎಂದರೆ ಸರಿಯಲ್ಲ. ಸಾಕ್ಷಿಗೆ 2 ಛಾಯಾಚಿತ್ರಗಳನ್ನು ತೋರಿಸಿ ಸದರಿ ಛಾಯಾಚಿತ್ರಗಳು ಕುಳಗಟ್ಟೆ ಗ್ರಾಮಕ್ಕೆ ಸಂಬಂಧಪಟ್ಟ ಛಾಯಾಚಿತ್ರಗಳು ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರಗಳಲ್ಲಿ ಕಾಣಿಸುತ್ತಿರುವ ಮನೆ ಮತ್ತು ರಸ್ತೆಯನ್ನು ನಾನು ಈಗ್ಗೆ 2 ವರ್ಷಗಳ ಹಿಂದೆ ಕುಳಗಟ್ಟೆ ಗ್ರಾಮದಲ್ಲಿ ನೋಡಿರುತ್ತೇನೆ ಆದರೆ ನಿರ್ದಿಷ್ಟವಾದ ಪ್ರದೇಶ ಯಾವುದು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ಮನೆಯು ದಾವಾ ಐಟಂ ನಂ.1 ರಲ್ಲಿರುವ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಗೆ 2 ಛಾಯಾಚಿತ್ರಗಳನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ದಾರಿಯು ದಾವಾ ಐಟಂ ನಂ.2 ರ ಆಸ್ತಿಯ ಉತ್ತರ ಭಾಗದಲ್ಲಿರುವ ಭದ್ರಾ ಸಬ್ ಚಾನಲ್ ಪಕ್ಕದಲ್ಲಿರುವ ರಸ್ತೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾರಿಯು 40 ಇಂಟು 90 ಅಡಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ 2 ಛಾಯಾಚಿತ್ರಗಳನ್ನು ತೋರಿಸಿ ಸದರಿ ಛಾಯಾಚಿತ್ರಗಳಲ್ಲಿ ಕಾಣಿಸುತ್ತಿರುವ ರಸ್ತೆಯು ತಾರೆಮರಕ್ಕೆ ಹೋಗುವ ರಸ್ತೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾರಿಯ 30 ಇಂಟು 1000 ಅಡಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ವಾಸದ ಮತ್ತು ರಸ್ತೆ ದಾವಾ ಐಟಂ ನಂ.2 ರ ಆಸ್ತಿಯ ದಕ್ಷಿಣ ಭಾಗದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಸ್ತೆಯು 25 ಇಂಟು 85 ಅಡಿ ಇರುತ್ತದೆ ಎಂದರೆ ನನಗೆ

ಗೊತ್ತಿಲ್ಲ. ದಾವಾ ಐಟಂ ನಂ.2 ರ ಆಸ್ತಿಯಲ್ಲಿ ಗ್ರಾಮ ಪಂಚಾಯಿತಿಯವರು ರಸ್ತೆ ಮತ್ತು ಚರಂಡಿಯನ್ನು ನಿರ್ಮಾಣ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕುಳಗಟ್ಟೆ ಗ್ರಾಮದಲ್ಲಿ ಹಾಲಿನ ಡೈರಿಯನ್ನು ನಾನು ನೋಡಿರುವುದಿಲ್ಲ. ಸಾಕ್ಷಿಗೆ 1 ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿರುವ ಹಾಲಿನ ಡೈರಿ, ರಸ್ತೆ, ಅಂಗನವಾಡಿ, ಶಾಲೆ ಮತ್ತು ಕ್ಯಾಸಿನಕೆರೆ ಈರಪ್ಪನ ಮನೆಯ ಮುಂಭಾಗದ ರಸ್ತೆ ದಾವಾ ಐಟಂ ನಂ.2 ರ ಆಸ್ತಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ 2 ಛಾಯಾಚಿತ್ರಗಳನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ಶಾಲೆ ದಾವಾ ಐಟಂ ನಂ.2 ರಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ 1 ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿರುವ ಅಂಗನವಾಡಿ, ಮನೆ ಮತ್ತು ರಸ್ತೆ ದಾವಾ ಐಟಂ ನಂ.2 ರ ಆಸ್ತಿಯಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ 15 ಗುಂಟೆ ಮತ್ತು 30 ಗುಂಟೆ ಸರ ಹಾದು ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ 25 ಗುಂಟೆ ಜಮೀನಿನಲ್ಲಿ ಜನತಾ ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ. 1 ಎಕರೆ 10 ಗುಂಟೆ ಜಮೀನಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಸತೀಶ ಎನ್ನುವವರು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 90 ಇಂಟು 100 ಅಡಿ ಕೆ ಕೆ ರಸ್ತೆ ಹಾದುಹೋಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ತಾರೆಮರದ ರಸ್ತೆ 20 ಅಡಿ ಅಗಲ 1500 ಅಡಿ ಉದ್ದ ಇದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಹೊರತುಪಡಿಸಿ ಕುಳಗಟ್ಟೆ ಗ್ರಾಮದಲ್ಲಿ ವಾಸದ ಮನೆಯನ್ನು ಕಟ್ಟಿಕೊಂಡಿದ್ದಾರೆ. ಸದರಿ ಮನೆಯನ್ನು ಈ ದಾವೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಮನೆಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲದ ಕಾರಣ ಸದರಿ ಮನೆಯನ್ನು ಈ ದಾವೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಮನೆಗೆ ಸಂಬಂಧಪಟ್ಟಂತೆ ನಮಗೆ ಯಾವುದೇ ದಾಖಲಾತಿಗಳು ಸಿಕ್ಕಿರುವುದಿಲ್ಲ ಆದ ಕಾರಣ ಸದರಿ ಮನೆಯನ್ನು ಈ ದಾವೆಯಲ್ಲಿ ನಮೂದು ಮಾಡಿಲ್ಲ

ಎಂದು ನುಡಿಯುತ್ತಾರೆ. ಸದರಿ ಮನೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.